ಅನ್ನುತ್ತಾರಲ್ಲ! ಏನು ಪರಿಹಾರ ಅದು? ಊರ ಸುತ್ತ ಬೇಕಾದಷ್ಟು ಭೂಮಿ ಇದೆ. ಎಲ್ಲ ಬಿಟ್ಟು ನಮ್ಮ ಜಮೀನೇ ಮಠದವರಿಗೆ ಬೇಕಾಗಿತ್ತೆ? ಅವನ ಪ್ರಶ್ನೆಗಳಿಗೆ ಉತ್ತರ ಇರಲಿಲ್ಲ.

★★★

ಮಠದವರ ಇಂಗ್ಲಿಷ್ ಸ್ಕೂಲಿಗೆ ಮೊದೀನ್ ಸಾಬರು ತಮ್ಮ ಎರಡೆಕರೆ ಭೂಮಿಯನ್ನು ಮುಫತ್ತಾಗಿ ಕೊಡುತ್ತಾರಂತೆ ಅಂತ ಕೆಲವರು ಸುದ್ದಿ ಹಬ್ಬಿಸಿದರು. ಅದರ ಬೆನ್ನಲ್ಲೇ ಗೋಮಾಳವನ್ನು ಸೂಗೂರು ಮಠದವರಿಗೆ ಲೀಸ್ ಮೇಲೆ ಕೊಡಬಹುದು ಅಂತ ತಹಸೀಲ್ದಾರ್ ಶಿಫಾರಸು ಮಾಡಿದ್ದಾರೆ ಅನ್ನೋದು ಊರವರಿಗೆ ಗೊತ್ತಾಯಿತು.

ಏನು ಆಗಬಾರದು ಅಂದುಕೊಂಡಿದ್ದೆವೊ ಅದೇ ಆಗುತ್ತಿದೆ ಅಂತ ಊರವರು ಆತಂಕಗೊಂಡರು. ಪಂಚಾಯ್ತಿಯ ಠರಾವು ಇಲ್ಲದೆ, ಸ್ಥಳ ಪರಿಶೀಲನೆ ಮಾಡದೆ ಶಿಫಾರಸು ಮಾಡುವ ಅಧಿಕಾರ ತಾಸೀಲ್ದಾರ್‌ಗೆ ಇಲ್ಲ. ಗೋಮಾಳದ ಜಮೀನು ಅವನಪ್ಪನ ಆಸ್ತಿಯಲ್ಲ ಅಂತ ಪಂಚಾಯ್ತಿ ಸಭೆಯಲ್ಲಿ ಪ್ರೆಸಿಡೆಂಟರು ರೇಗಿದರು ಅಂತಲೂ ಸುದ್ದಿ ಆಯಿತು.

ಊರ ಮುಂದಿನ ಅರಳಿ ಕಟ್ಟೆ ಮೇಲೆ ಕೂತು ಹರಟೆ ಹೊಡೆಯುತ್ತ ಕಾಲ ಕಳೆಯುವ ಕೆಲವರು ಈ ಸುದ್ದಿಗಳನ್ನು ಮತ್ತೆಮತ್ತೆ ಹೇಳುತ್ತ ಊರಿಗೆಲ್ಲ ಗೊತ್ತಾಗುವಂತೆ ಮಾಡಿದರು. ಕೆಲವರು ಮೊದೀನ್ ಅಂಗಡಿಗೂ ಬಂದು ನಾವು ಕೇಳಿದ್ದು ನಿಜವೇ ಅಂತ ವಿಚಾರಿಸಿದರು. ಎಚ್ಚೆತ್ತುಕೊಂಡ ಮೊದೀನ್ ಹೊಲದಲ್ಲಿ ನಮ್ಮ ಅಪ್ಪ ಅಮ್ಮ, ಚಿಕ್ಕಪ್ಪ ಚಿಕ್ಕಮ್ಮರ ಸಮಾಧಿಗಳಿರೋದು ನಿಮಗೇ ಗೊತ್ತಲ್ಲ ಅಂತ ಹೇಳುತ್ತಿದ್ದ. ಅದೇ ಸಮಯ ಟಿವಿಎಸ್ ರಾಮಣ್ಣನ ತಮ್ಮ ಬಂದು, 'ಅಣ್ಣಯ್ಯ ನಿನ್ನ ಜತೆ ಮಾತಾಡಬೇಕಂತೆ ಬಿಡುವು ಮಾಡಿಕೊಂಡು ಮನೆ ಕಡೆ ಬಾ ಮೊದೀನಣ್ಣ' ಅಂತ ಹೇಳಿ ಹೋದ.

## 2

ಮೊದೀನ್ ರಾತ್ರಿ ಎಂಟು ಗಂಟೆ ಹೊತ್ತಿಗೆ ರಾಮಣ್ಣನ ಮನೆಗೆ ಹೋದ. ರಾಮಣ್ಣನ ಹೆಸರಿನ ಹಿಂದೆ ಟಿವಿಎಸ್ ಅನ್ನೋದು ಸೇರಿಕೊಂಡಿದ್ದರ ಬಗ್ಗೆ ಇಲ್ಲೇ ಒಂದು ಮಾತು ಹೇಳಬೇಕಿದೆ. ಹೊಸಳ್ಳಿಗೆ ಮೊದಲು ಟಿವಿಎಸ್ ಮೊಪೆಡ್ ತಂದಿದ್ದು ಇದೇ ರಾಮಣ್ಣ. ಅದರಿಂದಾಗಿ ಅವನ ಹೆಸರಿನೊಂದಿಗೆ ಟಿವಿಎಸ್ ಸೇರಿಕೊಂಡಿತ್ತು. ಆ ಹಳೆಯ ಮೊಪೆಡ್ ಈಗಲೂ ಅವನ ಮನೆಯಲ್ಲಿದೆ.

ಮೊದೀನ್ ಬಂದಾಗ ರಾಮಣ್ಣ ಪಡಸಾಲೆಯಲ್ಲಿ ಚಾಪೆ ಮೇಲೆ ಯಾವುದೋ ಕಾಗದ ಪತ್ರಗಳನ್ನು ಹರಡಿಕೊಂಡು ಐದಾರು ಜನರ ಜತೆ ನೋಡುತ್ತ ಕೂತಿದ್ದ. ಬಾಗಿಲಲ್ಲಿ ಮೊದೀನ್ ನಿಂತದ್ದನ್ನು ಗಮನಿಸಿ, 'ಬಾರಣ್ಣಾ' ಅಂತ ಆತ್ಮೀಯವಾಗಿ ಕರೆದ. ರಾಮಣ್ಣ, ಮೊದೀನ್ ಇಬ್ಬರೂ ಎಸ್ಸೆಸ್ಸೆಲ್ಸಿ ವರೆಗೆ ಒಟ್ಟಿಗೆ ಓದಿದವರು. ಇಬ್ಬರೂ ಬಾಲ್ಯದ ಸ್ನೇಹ, ವಿಶ್ವಾಸಗಳನ್ನು ಕಾಪಾಡಿಕೊಂಡಿದ್ದರು. ಏಕವಚನದಲ್ಲೇ ಮಾತಾಡುವ ಸಲುಗೆ ಇದ್ದರೂ ಊರವರ ಎದುರು ಪರಸ್ಪರ ಅಣ್ಣ ಎಂದು ಕರೆಯುತ್ತ ಗೌರವದಿಂದ ನಡೆದುಕೊಳ್ಳುತ್ತಿದ್ದರು.

ಎಲ್ಲರ ಎದುರು ಜಮೀನು ವಿಷಯ ಕೇಳುವುದು ಬೇಡವೆಂದು, 'ಹಬ್ಬ ಬಂತಲ್ಲಪ್ಪ, ಮಕ್ಕಳಿಗೆ ಬಟ್ಟೆ ಹೊಲಿಸಬೇಕಿತ್ತು, ಅದಕ್ಕೇ ನಿಂಗೆ ಬರಹೇಳಿದೆ' ಅಂತ ವಿಷಯಾಂತರ ಮಾಡಿ ಕಷ್ಟ ಸುಖ ವಿಚಾರಿಸಿದರು. ಮನೆಯಲ್ಲಿದ್ದವರೆಲ್ಲ ಹೋದ ಮೇಲೆ, 'ಮಠದವರು ಜಮೀನು ಕೊಡು ಅಂತ ನಿನ್ನ ಕೇಳಿದರಂತೆ? ನೀನೇನು ಹೇಳಿದೆ' ಅಂತ ನೇರವಾಗಿ ರಾಮಣ್ಣ ಕೇಳಿದ.

'ನಿಂಗೇ ಗೊತ್ತಲ್ಲಪ್ಪ, ನಂಗೆ ಇರೋದೇ ಮೂವತ್ತೇಳು ಗುಂಟೆ. ಅದರಲ್ಲೇ ಅಪ್ಪ ಅಮ್ಮನ ಸಮಾಧಿಗಳಿವೆ. ಅದನ್ನು ಹೆಂಗೆ ಮಾರೋಕಾಗುತ್ತೆ? ನನ್ನ ಹೆಣಾನೂ ಅಲ್ಲೇ ಹೂಳಬೇಕು ಅಂತ ಮಕ್ಕಳಿಗೆ ಹೇಳಿದೀನಿ. ಸ್ವಾಮಿಗಳು ಎಲ್ಲದಕ್ಕೂ ಪರಿಹಾರ ಇದೆ ಅಂದರು. ಏನು ಪರಿಹಾರ ಅಂತ